**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\3918\2015\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 18/07/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕ್ ಶಿರೂರು ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 1) ಶ್ರೀ.ಎಂ.ವೈ.ಕೊಪ್ಪದ (ಪ್ರಭಾರ), 2)ಶ್ರೀ.ಅಪ್ಪಯ್ಯ.ಜಿ.ಬೀಡಿಮಠ, 3) ಶ್ರೀ.ಕೃಷ್ಣಕುಮಾರ ಬಾಕಳೆ ಮತ್ತು 4)ಶ್ರೀ.ಬಿ.ಎನ್.ರಾಘವೇಂದ್ರ (ಪ್ರಭಾರ) ರವರುಗಳ ದುರ್ನಡತೆಯ ಬಗ್ಗೆ.

**********

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕ್ ಶಿರೂರು ಗ್ರಾಮ ನಿವಾಸಿಯಾದ ಶ್ರೀ.ಪೀರ್‌ಸಾಬ್ ಮಾಬುಸಾಬ್ ರಾಜೇಖಾನವರ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕ್ ಶಿರೂರು ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಇನ್ನು ಮುಂದೆ, 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆಯ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

2010-11, 2011-12 ಮತ್ತು 2012-13ನೇ ಸಾಲಿನ ವಸತಿ ಯೋಜನೆ ಅಡಿಯಲ್ಲಿ ಕುಂದಗೋಳ ತಾಲ್ಲೂಕ್ ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬಡ ಫಲಾನುಭವಿಗಳ ಮನೆಗಳನ್ನು ನಿರ್ಮಿಸದೇ ಹಣವನ್ನು ಪಡೆದುಕೊಂಡು ಅವ್ಯವಹಾರ ಮಾಡಿದ್ದಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಕುಂದಗೋಳ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ವರದಿಯನ್ನು ಕೇಳಲಾಗಿ, ಸದರಿಯವರು ಎಸ್‌ಬಿಎಂ ತಾಲ್ಲೂಕ್ ಸಮಾಲೋಚಕರು ಮತ್ತು ವಿಷಯ ನಿರ್ವಾಹಕರು, ತಾಲ್ಲೂಕ್ ಪಂಚಾಯತ್, ಕುಂದಗೋಳ ರವರ ವರದಿಯನ್ನು ಸಲ್ಲಿಸಿದ್ದಾರೆ. ಸದರಿ ವರದಿಯಲ್ಲಿ –

ಶ್ರೀಮತಿ.ಲಲಿತವ್ವ ಮಹದೇವಪ್ಪ ಗುಡಗೇರಿ (ಫಲಾನುಭವಿ ಕೋಡ್ ಸಂಖ್ಯೆ:64894) ಮತ್ತು ಶ್ರೀಮತಿ.ಕಮಲವ್ವ ಈಶ್ವರಪ್ಪ ಹೊಸಮನಿ (ಫಲಾನುಭವಿ ಕೋಡ್ ಸಂಖ್ಯೆ:64908) ರವರುಗಳು ಮನೆ ಕಟ್ಟಿಸದೇ ಸದರಿಯವರುಗಳಿಗೆ ಹಣ ಪಾವತಿಯಾಗಿರುವುದು ಕಂಡು ಬಂದಿದೆಯೆಂದು ಹೇಳಿದ್ದಾರೆ.

4. 2010–11ನೇ ಸಾಲಿನಲ್ಲಿ ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಅಧ್ಯಕ್ಷರ ಸೇವಾ ವಿವರಗಳನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್, ಕುಂದಗೋಳ ರವರನ್ನು ಕೇಳಲಾಗಿ, ಸದರಿಯವರು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದ 1)ಶ್ರೀ.ಬಸಪ್ಪ ಹನುಮಂತಪ್ಪ ತೊಂಡೂರು (ಹಿಂದಿನ ಅಧ್ಯಕ್ಷರು), ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 2) ಶ್ರೀ.ಎಸ್.ಪಿ.ಮುಳ್ಳಪ್ಪಗೌಡ್ರ, 3) ಶ್ರೀ.ಎಸ್.ವಿ.ಕಾಯಕದ, 4) ಶ್ರೀ.ಸಿ.ಎಸ್.ರೋಣದ, 5)ಶ್ರೀ.ಎನ್.ಎಸ್.ಬಿದರಳ್ಳಿ, 6) ಶ್ರೀ.ಐ.ಸಿ.ಉಮ್ರಾಣಿ, 7) ಶ್ರೀ.ಎನ್.ವಿ.ಶೆಟ್ಟಣ್ಣವರ, ಅದ್ಯಕ್ಷರುಗಳಾಗಿದ್ದ 8)ಶ್ರೀಮತಿ.ನಿಂಗವ್ವ ನಿಂಗಪ್ಪ ಛಲವಾದಿ, 9) ಶ್ರೀಮತಿ.ಯಲ್ಲವ್ವ ಬಸಪ್ಪ ನೇರ್ತಿ ಹಾಗೂ ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 10) ಶ್ರೀ.ಎಂ.ವೈ.ಕೊಪ್ಪದ, 11) ಶ್ರೀ.ಅಪ್ಪಯ್ಯ ಜಿ ಬೀಡಿಮಠ, 12) ಶ್ರೀ.ಕೃಷ್ಣಕುಮಾರ ಬಾಕಳೆ, 13) ಶ್ರೀ.ಎಂ.ವೈ.ಕೊಪ್ಪದ, 14) ಶ್ರೀ.ಯು.ಸಿ.ತುಪ್ಪದಗೌಡರ ಮತ್ತು 15) ಶ್ರೀ.ಬಿ.ಎನ್.ರಾಘವೇಂದ್ರ ರವರುಗಳನ್ನು 2 ರಿಂದ 16ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಗಳನ್ನು ಕೇಳಲಾಯಿತು.

5. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:15/06/2010 ರಿಂದ ಏಪ್ರಿಲ್, 2011ರ ಅವಧಿಯಲ್ಲಿ ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷರಾಗಿದ್ದು, ವಸತಿ ಯೋಜನೆಗೆ ತಮ್ಮ ಕಾರ್ಯಾವಧಿಯಲ್ಲಿ ಜಿಪಿಎಸ್ ಮಾಡುವ ತಂತ್ರಜ್ಞಾನವನ್ನು ಅಳವಡಿಸಿದೆ, ಅದರಂತೆ ಎಲ್ಲಾ ಫಲಾನುಭವಿಗಳ ಮನೆಯನ್ನು ಪಂಚಾಯತ್ ಸಿಬ್ಬಂದಿಗಳ ಮುಖಾಂತರ ಜಿಪಿಎಸ್ ಮಾಡಿಸಿ, ಹಣ ಪಾವತಿಸಿದೆ. ಆದ್ದರಿಂದ, ಇದರಲ್ಲಿ ತಮ್ಮ ಕಡೆಯಿಂದ ಯಾವುದೇ ರೀತಿಯ ಕರ್ತವ್ಯ ಲೋಪವಾಗಿಲ್ಲವೆಂದು ಹೇಳಿದ್ದಾರೆ.

6. ಮೂರನೇ (3ನೇ) ಎದುರುದಾರರು ದಿನಾಂಕ:15/02/12ರಂದು ಮೃತಪಟ್ಟಿರುವುದಾಗಿ ತಿಳಿದು ಬಂದಿದೆ.

BGM/3918/15



7. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿ ದಿನಾಂಕ:04/05/09 ರಿಂದ 02/11/09ರವರೆಗೆ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ:02/11/09ರಂದು 3ನೇ ಎದುರುದಾರರಿಗೆ ಪ್ರಭಾರವನ್ನು ವಹಿಸಿದೆ. ದೂರುದಾರರು ಮಾಡಿರುವ ಆಪಾದನೆ ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

8. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ:02/07/10 ರಿಂದ 07/07/10ರವರೆಗೆ [5 ದಿನಗಳು ಮಾತ್ರ] ಕಾರ್ಯನಿರ್ವಹಿಸಿದ್ದು, ಆ ಅವಧಿಯಲ್ಲಿ ಯಾವುದೇ ಹಣಕಾಸಿನ ವ್ಯವಹಾರವನ್ನು ತಾವು ಮಾಡಿಲ್ಲ. ದಿನಾಂಕ:07/07/10ರಂದು 6ನೇ ಎದುರುದಾರರಿಗೆ ಪ್ರಭಾರವನ್ನು ಹಸ್ತಾಂತರಿಸಿರುವುದಾಗಿ ಹೇಳಿದ್ದಾರೆ.

9. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ದಿನಾಂಕ:05/07/10 ರಿಂದ 20/01/11ರವರೆಗೆ ಕಾರ್ಯನಿರ್ವಹಿಸಿದ್ದು, ಆ ಅವಧಿಯಲ್ಲಿ ಯಾವುದೇ ಫಲಾನುಭವಿ ಆಯ್ಕೆ ಪ್ರಕ್ರಿಯೆ ನಡೆದಿಲ್ಲವೆಂದು ಹೇಳಿದ್ದಾರೆ.

10. ಏಳನೇ (7ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:18/02/08 ರಿಂದ 20/06/2010ರವರೆಗೆ ಕುಂದಗೋಳ ತಾಲ್ಲೂಕ್ ಪಂಚಾಯತ್ ಕಛೇರಿಯಲ್ಲಿ 1ನೇ ದರ್ಜೆ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ತಿಳುವಳಿಕೆ ಪ್ರಕಾರ, ಅದೇ ಸಮಯದಲ್ಲಿ ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿರುವುದಾಗಿ ಹೇಳಿದ್ದಾರೆ.

11. ಎಂಟನೇ (8ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

12. ಒಂಬತ್ತನೇ (9ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಅನಕ್ಷರಸ್ಥರಾಗಿದ್ದು, ಯಾವುದೇ ವಸತಿ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ, ಆಯ್ಕೆ ಸಮಿತಿಯ ಮುಂದೆಯೇ ಸರ್ವ ಸದಸ್ಯರನ್ನು ಗಮನಕ್ಕೆ ತೆಗೆದುಕೊಂಡು ಹಾಗೂ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ತಿಳುವಳಿಕೆಯನ್ನು ಪಡೆದಿದೆ. ಆದ್ದರಿಂದ, ಸದರಿ ವಿಷಯದಲ್ಲಿ ತಾವು ಯಾವುದೇ ತಪ್ಪು ಮಾಡಿಲ್ಲವೆಂದು ಹೇಳುತ್ತಾ, ಯಾವುದೇ ರೀತಿಯಲ್ಲಿ ತಪ್ಪುಗಳಾಗಿದ್ದರೂ, ಫಲಾನುಭವಿಗಳಿಂದ ನೇರವಾಗಿ ಹಣವನ್ನು ತುಂಬಿಸಿಕೊಳ್ಳಬೇಕೆಂದು ಹೇಳಿದ್ದಾರೆ.

13. ಹತ್ತನೇ (10ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ಗೆ ದಿನಾಂಕ:07/07/15 ರಂದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಮಾರ್ಗಸೂಚಿಗಳನ್ವಯ ವಸತಿ ಯೋಜನೆಯ ಫಲಾನುಭವಿಗಳನ್ನು ಗ್ರಾಮಸಭೆಯಲ್ಲಿ ಆಯ್ಕೆ ಮಾಡಿದ ನಂತರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಂತ ಹಂತವಾಗಿ ಮನೆಗಳ ಪ್ರಗತಿಯನ್ನು ಜಿಪಿಎಸ್ ಮಾಡಿ ರಾಜೀವ್ ಗಾಂಧಿ ವಸತಿ ನಿಗಮದ ಅಂತರ್ಜಾಲಕ್ಕೆ ಅಪ್‌ಲೋಡ್ ಮಾಡಿದನ್ವಯ ನಿಗಮದಿಂದ ಫಲಾನುಭವಿ ಖಾತೆಗೆ ನೇರವಾಗಿ ಹಣ ಜಮೆ ಆಗಿದೆ. ಆದ್ದರಿಂದ, ದೂರಿನ ಆಪಾದನೆಯಲ್ಲಿ ತಮ್ಮ ಪಾತ್ರ ಇಲ್ಲವೆಂದು ಹೇಳಿದ್ದಾರೆ.

14. ಹನ್ನೊಂದನೇ (11ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ:26/07/13 ರಿಂದ 15/08/13 ರವರೆಗೆ ಮತ್ತು ದಿನಾಂಕ:03/06/14 ರಿಂದ 27/04/15ರವರೆಗೆ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಫಲಾನುಭವಿಗಳಿಗೆ ಚೆಕ್ ಮೂಲಕ ಹಣ ನೀಡಿದ್ದರೆ, ಮನೆ ನಿರ್ಮಾಣದ ಹಂತವಾರು ಛಾಯಾಚಿತ್ರವನ್ನು ಮತ್ತು ಆನ್‌ಲೈನ್ ಮೂಲಕ ಜಿಪಿಎಸ್ ನಲ್ಲಿ ಮನೆ ನಿರ್ಮಾಣದ ಪ್ರಗತಿಯನ್ನು ಪರಿಶೀಲಿಸಿದೆಯೆಂದು ಹೇಳಿದ್ದಾರೆ.

15. ಹನ್ನೆರಡನೇ (12ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ:15/08/13 ರಿಂದ 02/02/14 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಂಡಂತೆ ಹಂತವಾರು ಜಿಪಿಎಸ್‌ಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಅಂತರ್ಜಾಲಕ್ಕೆ ಅಪ್‌ಲೋಡ್ ಮಾಡಿದ್ದು, ಜಿಪಿಎಸ್‌ಗಳನ್ನು ಆಡಿಟ್ ಮಾಡಿ, ಸರಿ ಎಂದು ಕಂಡು ಬಂದ ನಂತರ ನಿಗಮದಿಂದ ಫಲಾನುಭವಿ ಖಾತೆಗೆ ನೇರವಾಗಿ ಹಣ ಜಮೆ ಆಗಿದೆ. ಆದ್ದರಿಂದ, ದೂರಿನ ಆಪಾದನೆಯಲ್ಲಿ ತಮ್ಮ ಪಾತ್ರ ಇಲ್ಲವೆಂದು ಹೇಳಿದ್ದಾರೆ.

BGM/3918/15



16. ಹದಿಮೂರನೇ (13ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:03/03/14 ರಿಂದ 27/05/14ರವರೆಗೆ ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಂಡಂತೆ ಹಂತವಾರು ಜಿಪಿಎಸ್‌ಗಳನ್ನು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಅಂತರ್ಜಾಲಕ್ಕೆ ಅಪ್‌ಲೋಡ್ ಮಾಡಿದ್ದು, ಜಿಪಿಎಸ್‌ಗಳನ್ನು ಆಡಿಟ್ ಮಾಡಿ, ಸರಿ ಎಂದು ಕಂಡು ಬಂದ ನಂತರ ನಿಗಮದಿಂದ ಫಲಾನುಭವಿ ಖಾತೆಗೆ ನೇರವಾಗಿ ಹಣ ಜಮೆ ಆಗಿದೆ. ಆದ್ದರಿಂದ, ದೂರಿನ ಆಪಾದನೆಯಲ್ಲಿ ತಮ್ಮ ಪಾತ್ರ ಇಲ್ಲವೆಂದು ಹೇಳಿದ್ದಾರೆ.

17. ಹನ್ನೊಂದು (11) ಮತ್ತು 14ನೇ ಎದುರುದಾರರು ಒಬ್ಬರೇ ಆಗಿದ್ದಾರೆ.

18. ಹದಿನೈದನೇ (15ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿ:09/09/14, 10/09/14 ಮತ್ತು 17/09/14ರಂದು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಸದರಿ ದಿನಗಳಂದು ವಸತಿ ಯೋಜನೆಗಳ ಜಿಪಿಎಸ್ ಮತ್ತು ಎಂಜಿಎನ್‌ಆರ್‌ಇಜಿ ಕಾಮಗಾರಿಗಳನ್ನು ಮಾಡಿಲ್ಲವೆಂದು ಹೇಳಿದ್ದಾರೆ.

19. ಹದಿನಾರನೇ (16ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಶಿರೂರು ಗ್ರಾಮ ಪಂಚಾಯತ್‌ನಲ್ಲಿ ದಿನಾಂಕ:27/04/15 ರಿಂದ 04/04/16 ರವರೆಗೆ ಪ್ರಭಾರಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಫಲಾನುಭವಿಗಳಿಗೆ ಯಾವುದೇ ರೀತಿಯ ಹಣ ಪಾವತಿಯಾಗಿಲ್ಲವೆಂದು ಹೇಳಿದ್ದಾರೆ.

20. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಕುಂದಗೋಳ ತಾಲ್ಲೂಕಿನ ಶಿರೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ವಸತಿ ಯೋಜನೆಯಲ್ಲಿ 2010 ರಿಂದ 2013ರವರೆಗಿನ ಅವಧಿಯಲ್ಲಿ ಒಟ್ಟು 51 ಫಲಾನುಭವಿಗಳು ಆಯ್ಕೆಯಾಗಿದ್ದಾರೆಂದು ಕುಂದಗೋಳ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರ ಪತ್ರ ಸಂಖ್ಯೆ:ಅನಂ\ತಾಪಂಕು\ವಸತಿ\ತನಿಖೆ\2017-18\422 ದಿನಾಂಕ:08/11/17 ರೊಂದಿಗೆ ಸಲ್ಲಿಸಿರುವ ದಿನಾಂಕ:07/11/17ರ ವರದಿ ಸಂಖ್ಯೆ:ಅನಂ\ತಾಪಂಕು\ವಸತಿ\ತನಿಖೆ\ 2017-18ರಲ್ಲಿ ಕಂಡು ಬಂದಿದೆ;

2) ಸದರಿ ವರದಿಯನ್ವಯ 2010–11ನೇ ಸಾಲಿನ ಬಸವ ವಸತಿ ಯೋಜನೆ (ಬಿಹೆಚ್‌ಎಸ್) ಯ ಫಲಾನುಭವಿಗಳಾದ 1) ಶ್ರೀಮತಿ.ಲಲಿತವ್ವ ಮಹದೇವಪ್ಪ ಗುಡಿಗೇರಿ, ಫಲಾನುಭವಿ ಕೋಡ್ ಸಂಖ್ಯೆ:64894 [ಕ್ರಮ ಸಂಖ್ಯೆ–26] ಮತ್ತು 2) ಶ್ರೀಮತಿ.ಕಮಲವ್ವ ಈಶ್ವರಪ್ಪ ಹೊಸಮನಿ ಫಲಾನುಭವಿ ಕೋಡ್ ಸಂಖ್ಯೆ:64908 [ಕ್ರಮ ಸಂಖ್ಯೆ–33] ರವರುಗಳು ಮನೆ ಕಟ್ಟಿಸದೇ, ಹಣ ಪಡೆದುಕೊಂಡಿರುವುದು ಸ್ಥಳ ತನಿಖೆಯಿಂದ ಕಂಡು ಬಂದಿದೆ;

3) ಶ್ರೀಮತಿ.ಲಲಿತವ್ವ ಮಹದೇವಪ್ಪ ಗುಡಿಗೇರಿ ರವರ ಮನೆಯ ತಳಪಾಯ, ಲಿಂಟೆಲ್ ಮತ್ತು ಮೇಲ್ಛಾವಣಿಯ ಜಿಪಿಎಸ್ ಅನ್ನು ದಿನಾಂಕ:29/03/14ರಂದು ಮತ್ತು ಪೂರ್ಣಗೊಂಡ ಮನೆಯ ಜಿಪಿಎಸ್ ಅನ್ನು ದಿನಾಂಕ:25/11/14ರಂದು ಹಾಗೂ ಶ್ರೀಮತಿ.ಕಮಲವ್ವ ಈಶ್ವರಪ್ಪ ಹೊಸಮನಿ ರವರ ಮನೆಯ ತಳಪಾಯ, ಲಿಂಟೆಲ್ ಮತ್ತು ಮೇಲ್ಛಾವಣಿಯ ಜಿಪಿಎಸ್ ಅನ್ನು ದಿನಾಂಕ:11/11/13ರಂದು ಮತ್ತು ಪೂರ್ಣಗೊಂಡ ಮನೆಯ ಜಿಪಿಎಸ್ ಅನ್ನು ದಿನಾಂಕ:10/08/15ರಂದು ಮಾಡಿರುವುದು ಜಿಪಿಎಸ್ ದಾಖಲೆಯಲ್ಲಿ ಕಂಡು ಬಂದಿದೆ;

4) ಶ್ರೀಮತಿ.ಕಮಲವ್ವ ಈಶ್ವರಪ್ಪ ಹೊಸಮನಿ ರವರಿಗೆ ದಿನಾಂಕ:19/11/13, 23/01/15 ಮತ್ತು 27/08/15 ರಂದು ಕ್ರಮವಾಗಿ, ₹37,500/–, ₹17,000/– ಮತ್ತು ₹20,000/–, ಒಟ್ಟು ₹74,500/– ಹಾಗೂ ಶ್ರೀಮತಿ.ಲಲಿತವ್ವ ಮಹದೇವಪ್ಪ ಗುಡಿಗೇರಿ ರವರಿಗೆ ದಿನಾಂಕ:14/05/14 ಮತ್ತು 01/12/14 ರಂದು ಕ್ರಮವಾಗಿ, ₹54,500/– ಮತ್ತು ₹20,000/–, ಒಟ್ಟು ₹74,500/– ಸಹಾಯಧನ ಬಿಡುಗಡೆಯಾಗಿ, ಸದರಿಯವರ ಬ್ಯಾಂಕ್ ಖಾತೆಗಳಿಗೆ ಜಮಾ ಆಗಿದೆ;

5) ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅನುಷ್ಠಾನಗೊಳ್ಳುವ ಗ್ರಾಮೀಣ ವಸತಿ ಮತ್ತು ನಿವೇಶನ ಯೋಜನೆಗಳ ಮಾರ್ಗಸೂಚಿಗಳನ್ವಯ (ಸರ್ಕಾರದ ಆದೇಶ ಸಂಖ್ಯೆ:ವಇ 202 ಹೆಚ್‌ಎಹೆಚ್ 2014 ದಿನಾಂಕ:30/08/14) –

   1. ವಸತಿ ಯೋಜನೆಯ ಫಲಾನುಭವಿಗಳು ಕಾಮಗಾರಿ ಆದೇಶ ಪಡೆದ ತಕ್ಷಣ ಮನೆ ನಿರ್ಮಾಣ ಪ್ರಾರಂಭ ಮಾಡತಕ್ಕದ್ದು ಮತ್ತು ಮೂರು ತಿಂಗಳೊಳಗಾಗಿ ಫಲಾನುಭವಿಯು ತಳಪಾಯ ಹಂತವನ್ನು ಪೂರ್ಣಗೊಳಿಸಿ, ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸದರಿ ಹಂತದ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯನ್ನು ನಿಗಮದ ಅಂತರ್ಜಾಲಕ್ಕೆ ಅಳವಡಿಸಬೇಕು;

   2. ಅದೇ ಮಾದರಿಯಲ್ಲಿ ಹಂತವಾರು ಜಿಪಿಎಸ್ ಆಧಾರಿತ ಕಿಟಕಿಮಟ್ಟ, ಛಾವಣಿ ಮಟ್ಟ ಹಾಗೂ ಪೂರ್ಣಗೊಂಡ ಮಟ್ಟದ ಮನೆಯ ಭೌತಿಕ ಪ್ರಗತಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ನಿಗಮದ ಅಂತರ್ಜಾಲಕ್ಕೆ ಅಳವಡಿಸಬೇಕು;

   3. ಅನುದಾನ ಬಿಡುಗಡೆ ಮಾಡಲು ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಮನೆ ನಿರ್ಮಾಣದ ಸಂಬಂಧ ನಾಲ್ಕು ಹಂತಗಳ (ತಳಪಾಯ, ಕಿಟಕಿ, ಛಾವಣಿ ಮತ್ತು

BCM/3918/15



ಪೂರ್ಣಗೊಂಡ ಹಂತ) ಜಿಪಿಎಸ್ ಛಾಯಾಚಿತ್ರಗಳನ್ನು ನಿಗಮದ ಅಂತರ್ಜಾಲಕ್ಕೆ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.

6) ಮನೆ ನಿರ್ಮಾಣದ ನಾಲ್ಕೂ ಹಂತಗಳಲ್ಲೂ ಜಿಪಿಎಸ್ ಮಾಡುವಾಗ ಫಲಾನುಭವಿ ಜೊತೆಗೆ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ \ ಕಾರ್ಯದರ್ಶಿಯು ಕಡ್ಡಾಯವಾಗಿ ಜಿಪಿಎಸ್ ಚಿತ್ರದಲ್ಲಿ ಇರಬೇಕು. ಅಕ್ಕಪಕ್ಕದ ಮನೆ ಅಥವಾ ಸುತ್ತಮುತ್ತಲಿನ ಪ್ರದೇಶ ಜಿಪಿಎಸ್ ಚಿತ್ರದಲ್ಲಿ ಗೋಚರಿಸುವಂತಿರಬೇಕು ಮತ್ತು ಪ್ರತಿ ನಿರ್ಮಾಣ ಹಂತದಲ್ಲಿ ಆಯಾಯ ಹಂತದ ಛಾಯಾಚಿತ್ರವಾಗಿರಬೇಕು ಮತ್ತು ಪೂರ್ಣಗೊಂಡ ಹಂತದ ಛಾಯಾಚಿತ್ರದಲ್ಲಿ ಮನೆಯು ಪೂರ್ಣಗೊಂಡು, ಸುಣ್ಣಬಣ್ಣ ಹಚ್ಚಿ, ವಾಸಕ್ಕೆ ಯೋಗ್ಯವಾಗಿರುವಂತೆ ಗೋಚರಿಸಬೇಕು;

7) ಆದರೆ, ಫಲಾನುಭವಿಗಳಾದ ಶ್ರೀಮತಿ.ಕಮಲವ್ವ ಈಶ್ವರಪ್ಪ ಹೊಸಮನಿ ಮತ್ತು ಶ್ರೀಮತಿ.ಲಲಿತವ್ವ ಮಹದೇವಪ್ಪ ಗುಡಿಗೇರಿ ರವರು ನಿರ್ಮಿಸಿದ್ದಾರೆಂದು ಹೇಳಲಾದ ಮನೆಗಳ ತಳಪಾಯ ಹಂತ, ಕಿಟಿಕಿ ಹಂತ ಮತ್ತು ಛಾವಣಿ ಹಂತದ ಭಾವಚಿತ್ರಗಳನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡದೇ, ಆದರೆ ಮನೆಗಳ ಛಾವಣಿ ಹಂತದ ಭಾವಚಿತ್ರಗಳನ್ನು ತೆಗೆದು ನಿಗಮದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿರುವುದು ಕಂಡು ಬಂದಿದೆ ಮತ್ತು ಸದರಿ ಜಿಪಿಎಸ್ ಚಿತ್ರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಇಲ್ಲ;

8) ಶ್ರೀಮತಿ.ಕಮಲವ್ವ ಈಶ್ವರಪ್ಪ ಹೊಸಮನಿ ಮತ್ತು ಶ್ರೀಮತಿ.ಲಲಿತವ್ವ ಮಹದೇವಪ್ಪ ಗುಡಿಗೇರಿ ರವರು ನಿರ್ಮಾಣ ಮಾಡಿದ್ದಾರೆಂದು ಹೇಳಲಾದ ಮನೆಗಳ ಜಿಪಿಎಸ್ ದಾಖಲೆಗಳಲ್ಲಿ ಮನೆ ನಿರ್ಮಾಣ ಪೂರ್ತಿಯಾಗಿದೆಯೆಂಬಂತೆ ಭಾವಚಿತ್ರಗಳನ್ನು ದಿನಾಂಕ:11/11/13, 29/03/14, 25/11/14 ಮತ್ತು 10/08/15 ರಂದು ಅಪ್‌ಲೋಡ್ ಮಾಡಿರುವುದು ಕಂಡು ಬಂದಿದೆ. ಸದರಿ ಅವಧಿಯಲ್ಲಿ ಶಿರೂರು ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದವರ ವಿವರಗಳು ಈ ಕೆಳಗಿನಂತಿದೆ –

| ಕ್ರ.ಸಂ. | ದಿನಾಂಕ | ಪಿಡಿಒ | ಅಧ್ಯಕ್ಷರು |
|---|---|---|---|
| 1 | 11/11/13 | 12ನೇ ಎದುರುದಾರರು | 9ನೇ ಎದುರುದಾರರು |
| 2 | 29/03/14 | 13ನೇ ಎದುರುದಾರರು | |
| 3 | 25/11/14 | 11 / 14ನೇ ಎದುರುದಾರರುಗಳು (ಒಬ್ಬರೇ ಆಗಿರುತ್ತಾರೆ) | |
| 4 | 10/08/15 | 16ನೇ ಎದುರುದಾರರು | 10ನೇ ಎದುರುದಾರರು |

9) ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಅನುಷ್ಠಾನಗೊಳ್ಳುವ ಗ್ರಾಮೀಣ ವಸತಿ ಮತ್ತು ನಿವೇಶನ ಯೋಜನೆಗಳ ಮಾರ್ಗಸೂಚಿಗಳನ್ವಯ, ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಮನೆಗಳ ಆಯಾಯ ಭೌತಿಕ ಪ್ರಗತಿಯನ್ನು ಜಿಪಿಎಸ್ ಛಾಯಾಚಿತ್ರಗಳ ಮೂಲಕ

ನಿಗಮದ ವೆಬ್‌ಸೈಟ್‌ಗೆ ಅಳವಡಿಸುವ ಆಧಾರದ ಮೇಲೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ವಸತಿ ನಿಗಮದಿಂದಲೇ ಹಣ ಬಿಡುಗಡೆಯಾಗುವುದರಿಂದ, ಸದರಿ ಪ್ರಕ್ರಿಯೆಯಲ್ಲಿ ಪಂಚಾಯತ್ ಅಧ್ಯಕ್ಷರ ಪಾತ್ರ ಇಲ್ಲದಿರುವುದು ಕಂಡು ಬಂದಿದೆ.

21. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 11 ರಿಂದ 13 ಮತ್ತು 16ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

22. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 11(14) ರಿಂದ 13 ಮತ್ತು 16ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

23. ಒಂದರಿಂದ 10 ಮತ್ತು 15ನೇ ಎದುರುದಾರರುಗಳ ವಿರುದ್ಧ ಯಾವುದೇ ಕರ್ತವ್ಯ ಲೋಪ ಕಂಡು ಬಂದಿಲ್ಲವಾದ್ದರಿಂದ, 1 ರಿಂದ 10 ಮತ್ತು 15ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

24. ಅದಲ್ಲದೆ, 11 (14) ರಿಂದ 13 ಮತ್ತು 16ನೇ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 11 (14) ರಿಂದ 13 ಮತ್ತು 16ನೇ ಎದುರುದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

BSM/3918/15



25. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 18/7

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

18/7